4) ಚಾಮರಾಜನಗರ ಜಿಲ್ಲೆಯಲ್ಲಿ ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯು ಈಗಾಗಲೇ ಪುನರಾರಂಭಗೊಂಡಿದೆ. ಸಂತೇಮಾರಳ್ಳಿಯಲ್ಲಿ ಮತ್ತೊಂದು ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಪ್ರಸ್ತಾವನೆ ಸ್ವೀಕರಿಸಲಾಗಿದ್ದು, ಪರಿಶೀಲನೆಯಲ್ಲಿದೆ.

5) ರಾಜ್ಯದಲ್ಲಿ 8 ಸಕ್ಕರೆ ಕಾರ್ಖಾನೆಗಳು ಆರ್ಥಿಕ ಸಂಕಷ್ಟದಿಂದಾಗಿ ಮತ್ತು ಕಬ್ಬಿನ ಕೊರತೆಯಿಂದಾಗಿ ಮುಚ್ಚಿರುತ್ತವೆ. ಇವುಗಳಲ್ಲಿ 4 ಕಾರ್ಖಾನೆಗಳು ಸಹಕಾರಿ ರಂಗದ, 1 ಕಾರ್ಖಾನೆ ಜಂಟಿ ವಲಯದ ಮತ್ತು 3 ಕಾರ್ಖಾನೆಗಳು ಖಾಸಗಿ ವಲಯದ ಕಾರ್ಖಾನೆಗಳಾಗಿರುತ್ತವೆ.

ಸಹಕಾರಿ ವಲಯದ 4 ಕಾರ್ಖಾನೆಗಳನ್ನು ಖಾಸಗಿಯವರಿಗೆ ದೀರ್ಘಾವಧಿ ಗುತ್ತಿಗೆ ಆಧಾರದ ಮೇಲೆ ನೀಡಿ ಪುನಃಶ್ಚೇತನಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಜಂಟಿ ವಲಯದ ಗಂಗಾವತಿ ಸಕ್ಕರೆ ಕಾರ್ಖಾನೆಗಳನ್ನು ಮುಚ್ಚಲಾಗಿದ್ದು, ಈ ಕಾರ್ಖಾನೆಯನ್ನು ಸಾಲ ವಸೂಲಾತಿ ನ್ಯಾಯಾಧಿಕರಣವು ಬಹಿರಂಗ ಹರಾಜು ಮೂಲಕ ಖಾಸಗಿಯವರಿಗೆ ಮಾರಾಟ ಮಾಡಿದ್ದು, ಹರಾಜು ಪ್ರಕ್ರಿಯೆ ವಿರುದ್ಧ ಕಾರ್ಖಾನೆಯ ಷೇರುದಾರರು ಸಾಲ ವಸೂಲಾತಿ ಮೇಲ್ಮನವಿ ನ್ಯಾಯಾಧಿಕರಣ ಚೆನ್ನೈ ಮುಂದೆ ಪ್ರಕರಣ ದಾಖಲಿಸಿದ್ದು, ಪ್ರಕರಣ ಬಾಕಿ ಇರುತ್ತದೆ.

ತುಂಗಭದ್ರಾ ಶುಗರ್ಸ್ (ಲಿ), (ದೇವಿ ಶುಗರ್ಸ್), ಶಿವಮೊಗ್ಗ, ಸುಂದರಿ ಶುಗರ್ಸ್, ಕಂಪ್ಲಿ, ಶಿರಗುಪ್ಪ ಶುಗರ್ಸ್, ಗೌರಿಬಿದನೂರು ಈ ಕಾರ್ಖಾನೆಗಳು ಖಾಸಗಿ ಕಾರ್ಖಾನೆಗಳಾಗಿದ್ದು, ಅವುಗಳ ಪುನಃಶ್ಚೇತನದ ಬಗ್ಗೆ ಕಾರ್ಖಾನೆಯ ಮಾಲೀಕರು ಅಗತ್ಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

2048 (2507) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಹಾಗೂ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ಚಾಮರಾಜನಗರ ಜಿಲ್ಲೆಗೆ ಹೊಸದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಮಂಜೂರು ಮಾಡಲಾಗುವುದೇ;

ಇ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿಯನ್ನು ನೀಡಲಾಗುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):

ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು – 182
ಖಾಸಗಿ ಅನುದಾನಿತ ಕಾಲೇಜುಗಳು – 299

ಆ) ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ಹಾಗೂ ಯಳಂದೂರು ಇಲ್ಲಿ ಅಂತಹ ಒಂದೊಂದು ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

2043 (2494) ಶ್ರೀ ಸಂಧೂರ ಜಿ. ರಾಜಶೇಖರ (ಶಿಗ್ಗಾಂವ್) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರ ನಗರದಲ್ಲಿ ಸೈನಿಕ ಶಾಲೆ ಇಲ್ಲದೇ ಇರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಡಾ॥ ನಂಜುಂಡಪ್ಪನವರ ವರದಿ ಪ್ರಕಾರ ಹಾವೇರಿ ಜಿಲ್ಲೆಯಲ್ಲಿಯ ಸವಣೂರು ತಾಲ್ಲೂಕು ಹಿಂದುಳಿದ ತಾಲ್ಲೂಕು ಆಗಿದ್ದು, ಇಲ್ಲಿ ಸೈನಿಕ ಶಾಲೆ ಅತೀ ಅವಶ್ಯವಾಗಿದ್ದು, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೂ ಸಹ ಅನುಕೂಲವಾಗುವುದರಿಂದ ಸೈನಿಕ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಇ) ಶಿಗ್ಗಾಂವ್–ಸವಣೂರು ತಾಲ್ಲೂಕುಗಳಲ್ಲಿ ಬರುವ ಗ್ರಾಮಾಂತರ ಪ್ರದೇಶದಲ್ಲಿ ಆಟದ ಮೈದಾನ ಇಲ್ಲದೇ ಇರುವುದು ಸರ್ಕಾರ ಗಮನಿಸಿದೆಯೇ;

ಈ) ಹಾಗಿದ್ದಲ್ಲಿ, ಆಟದ ಮೈದಾನವನ್ನು ಯಾವಾಗ ಕಲ್ಪಿಸಲಾಗುವುದು;

ಉ) ಆಟದ ಮೈದಾನ ಸಮಪಾತಳಿಯಲ್ಲಿ ಇಲ್ಲದೇ ಇರುವ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲೆಗಳು ಎಷ್ಟು; (ಗ್ರಾಮವಾರು ವಿವರ ನೀಡುವುದು)

ಊ) ಆಟದ ಮೈದಾನ ನಿರ್ಮಿಸುವುದು ಹಾಗೂ ಆಟದ ಮೈದಾನ ಸಮಪಾತಳಿಯನ್ನು ಯಾವ ಯೋಜನೆಯಡಿಯಲ್ಲಿ ನಿರ್ಮಾಣ ಮಾಡಲಾಗುವುದು; ಅಲ್ಲದೆ, ಆಟದ ಮೈದಾನ ನಿರ್ಮಾಣ ಹಾಗೂ ಆಟದ ಮೈದಾನ ಸಮಪಾತಳಿ ಮಾಡಲು ಸರ್ಕಾರ ಯಾವಾಗ ಅನುದಾನ ಬಿಡುಗಡೆಗೊಳಿಸಿ ಕಾಮಗಾರಿ ಪ್ರಾರಂಭಿಸಲಾಗುವುದು;

ಋ) ಶಿಗ್ಗಾಂವ್–ಸವಣೂರು ತಾಲ್ಲೂಕುಗಳಲ್ಲಿ ಈಗಾಗಲೇ ಮಂಜೂರು ಆಗಿರುವ ಹೊಸ ಪ್ರೌಢಶಾಲೆಗಳಿಗೆ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಯಾವಾಗ ಅನುದಾನ ಬಿಡುಗಡೆಗೊಳಿಸಿ ಕ್ರಮ ಕೈಗೊಳ್ಳುತ್ತದೆ;